

ಟಿ.ಎಸ್. ನಾಗರಾಜ ಶೆಟ್ಟಿ

# ಪುಟಾಣಿಗಳ ಓದಿಗೆ ಚಂದದ ಪುಟಗಳು




**ಮತ್ತೆ ಅವತರಿಸಿದ ದೈತ್ಯರು**
ಲೇ: ಜಂಬುನಾಥ ಕಂಚ್ಯಾಣಿ
ಬೆ: ರೂ. 125; ಪ್ರ: ಮಾನ್ಯತಾ ಸಾಹಿತ್ಯ ಪ್ರಕಾಶನ, ವಿಜಯಪುರ.
ಮೊ: 9901111734.

## ಮತ್ತೆ ಅವತರಿಸಿದ ದೈತ್ಯರು

ಮಕ್ಕಳಿಗೆ ವೈಜ್ಞಾನಿಕ ಕೃತಿಗಳ ರಚನೆ ಬಹಳ ವಿರಳ. ಜಂಬುನಾಥ ಕಂಚ್ಯಾಣಿ ಅವರು 'ಮತ್ತೆ ಅವತರಿಸಿದ ದೈತ್ಯರು' ಕಾದಂಬರಿಯಲ್ಲಿ ಅಂತಹ ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಸಂಕೇತ ಎಂಬ ವಿದ್ಯಾರ್ಥಿ ಶಿಕ್ಷಕರ ಬೆಂಬಲದಿಂದ ಸಂಶೋಧನೆ ಕೈಗೊಂಡು ಸಾಧನೆಯ ಮೆಟ್ಟಿಲೇರುವ ಸಾಹಸಗಾಥೆ ಇದು.

ನೆಲ ತೋಡಿದಾಗ ದೊರೆತ ಬೃಹತ್ ಗುಂಡುಗಳು ಮೊಟ್ಟೆಗಳೆಂದು ಪರೀಕ್ಷಿಸಿ ತಿಳಿದು ಕಾವು ಪೆಟ್ಟಿಗೆಗಳಲ್ಲಿ ಇಟ್ಟು ಕಾಯುವುದು, ಅವು ಮರಿಗಳಾಗಿ ಹೊರಬಂದು ಮಾಡುವ ಅವಾಂತರಗಳು ರೋಚಕ. ಕಾಲ್ಪನಿಕ ಕಥೆಯ ಜೊತೆ ವೈಜ್ಞಾನಿಕ ವಿಶ್ಲೇಷಣೆ ಕೂಡ ಸಮರ್ಪಕವಾಗಿ ನಿರೂಪಿತವಾಗಿದೆ. ಡೈನೋಸಾರ್‌ಗಳ ಪುನರವತಾರದ ಚಿತ್ರಣ ಎಲ್ಲೂ ಸಡಿಲವಾಗದೆ ಕುತೂಹಲ ಕೆರಳಿಸುತ್ತಲೇ ಸಾಗುತ್ತದೆ. ಕಥನಕ್ರಮ ಅಚ್ಚುಕಟ್ಟು. ಕೃತಿಯ ಉತ್ಪಾದನೆಯು ಆಕರ್ಷಕ.




## ಮುತ್ತಳ್ಳಿಯ ಅಜ್ಜಿ ಕಥೆಗಳು

ಪ್ರಸ್ತುತ ತುಂಬ ಮಕ್ಕಳ ಕಥೆಗಳನ್ನು ಬರೆಯುತ್ತಿರುವವರಲ್ಲಿ ಮತ್ತೂರು ಸುಬ್ಬಣ್ಣನವರು ಒಬ್ಬರು. ಮಕ್ಕಳು ಅಜ್ಜ ಅಜ್ಜಿಯರಿಂದ ದೂರವಿರುವ ದಿನಗಳಲ್ಲಿ ಪರಿಹಾರೋಪಾಯವಾಗಿ ಅವರು 'ಮುತ್ತಳ್ಳಿಯ ಅಜ್ಜಿ ಕಥೆಗಳು' ಕೃತಿ ರಚನೆ ಮಾಡಿದ್ದಾರೆ. ಎಲ್ಲ 15 ಕಥೆಗಳನ್ನು ನಾಗಮ್ಮ

**ಮುತ್ತಳ್ಳಿಯ ಅಜ್ಜಿ ಕಥೆಗಳು**
ಲೇ: ಮತ್ತೂರು ಸುಬ್ಬಣ್ಣ
ಬೆ: ರೂ. 100; ಪ್ರ: ಅನು ಪ್ರಕಾಶನ,ಬೆಂಗಳೂರು.
ಮೊ: 9448205956.